ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯದ ಸೆನಟ್‌ಗೆ ಐದು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿಯ ಪ್ರಸ್ತಾವ.

10.50 ಪಿ.ಎಂ

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಇದರಲ್ಲಿ (ಅ) ನಿಯಮ 211(1)ನ್ನು ತೆಗೆದುಹಾಕಲಾಗಿದೆ. (ಆ) ನಿಯಮ 370ನ್ನು ಈ ಕೆಳಕಂಡಂತೆ ಪ್ರತಿಯೋಜಿಸಲಾಗಿದೆ.

370 (1) ಸದನದ ಸದಸ್ಯರ ಅನುಕೂಲ ಮತ್ತು ಸೌಕರ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸಲು ಮತ್ತು ಆ ಬಗ್ಗೆ ಸಲಹೆ ನೀಡಲು ಒಂದು ಸದನ ಸಮಿತಿಯನ್ನು ರಚಿಸತಕ್ಕದ್ದು.

2) ಸಮಿತಿಯು ವಿಧಾನಸಭಾ ಉಪಾಧ್ಯಕ್ಷರನ್ನು ಮತ್ತು ಏಕ ವರ್ಗಾವಣೆಯ ಮತದ ಮೂಲಕ ದಾಮಾಷಾ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ಚುನಾಯಿತರಾಗುವ ಎಂಟು ಮಂದಿ ಸದಸ್ಯರನ್ನು ಹೊಂದಿರತಕ್ಕದ್ದು.

3) ಸಮಿತಿಯು ಒಂದು ವರ್ಷವನ್ನು ಮೀರದ ಅವಧಿಯವರೆಗೆ ಅಧಿಕಾರದಲ್ಲಿರತಕ್ಕದ್ದು.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಯಿತು.

ಡಾ|| ಎಂ.ಪಿ. ಕರ್ಕಿ : ಅಧ್ಯಕ್ಷರೆ, ಸರಿಯಾಗಿ ಕೇಳಿಸಲಿಲ್ಲ...

ಅಧ್ಯಕ್ಷರು : ರೂಲ್ಸ್ ಆಫ್ ಪ್ರೊಸೀಜರ್‌ಗೆ ಅಮೆಂಡ್‌ಮೆಂಟ್ ಮಾಡಿದ್ದೇವೆ.

ಡಾ|| ಎಂ.ಪಿ. ಕರ್ಕಿ : ನಮಗೆ ಕೇಳಿಸಲಿಲ್ಲ. ನಾವು ಕೇಳುವುದಕ್ಕೆ ಪ್ರಯತ್ನಮಾಡಿದರೂ ಆಗಲಿಲ್ಲ. ಮಾನ್ಯ ಮಂತ್ರಿಗಳು ಸ್ವಿಚ್ ಹಾಕದೆ ಮಾತನಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಅಸೆಂಬ್ಲಿ ಮತ್ತ ಕೌನ್ಸಿಲ್ ಸೆಕ್ರೆಟರಿಯೇಟ್‌ಗಳು ಪ್ರತ್ಯೇಕವಾದ್ದರಿಂದ ಅಸೆಂಬ್ಲಿಗೆ ಹೌಸ್ ಕಮಿಟಿ ಮತ್ತು ಕೌನ್ಸಿಲ್‌ಗೆ ಬೇರೆ ಹೌಸ್ ಕಮಿಟಿ ಮಾಡಬೇಕೆಂದು ಇದೆ. ಹಿಂದೆ ಇದುವರೆಗೆ ಜಾಯಿಂಟ್ ಹೌಸ್ ಕಮಿಟಿ ಇತ್ತು. ಇದಕ್ಕೆ ಒಂದು ತಿದ್ದುಪಡಿಯನ್ನು ತಂದು ನಮಗೆ ಪ್ರತ್ಯೇಕ ಹೌಸ್ ಕಮಿಟಿಯನ್ನು ಮಾಡಿಕೊಂಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸಭೆ ಮತ್ತು ಕೌನ್ಸಿಲ್ ಎರಡೂ ಬೇರೆ ಬೇರೆ ಆದಕಾರಣ ತಾವು ಈ ತಿದ್ದುಪಡಿಯನ್ನು ತಂದಿದ್ದೀರಿ. ಇದಕ್ಕೆ "There shall be appointed a House

Committee to consider and advise upon all matters conected with the convenience and comfort of the Members of the House."

ಎರಡನೆಯದು - "The Committee shall consist of the Deputy Speaker and 8 Members elected according to the principle of proportional representation by means of a single transferable vote." ಎಂದಿದೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಒಂದು ಏನಾಗಿದೆ ಎಂದರೆ ಹೋದಸಲವೇ ನಾವೆಲ್ಲರೂ ಸಿಗ್ನೇಚರ್ ಮಾಡಿ ಎಲ್ಲರೂ ಕೂಡಿ ತಮಗೆ ಒಂದು ಮನವಿಯನ್ನು ಕೊಟ್ಟಿದ್ದೇವೆ. ಅದೇನೆಂದರೆ ಈ ಸದನದಲ್ಲಿ ನಾವೆಲ್ಲರೂ ಕೂಡ ಒಪ್ಪಿಕೊಂಡು ಸಬ್ಜೆಕ್ಟ್ ಕಮಿಟಿ ತೆಗೆದುಹಾಕಬೇಕು ಎಂದು ಹೇಳಿ ತಿದ್ದುಪಡಿಯನ್ನು ತಂದರು. ನಾವು ಕೂಡ ಅದರಿಂದ ಏನಾದರೂ ಪ್ರಯೋಜನವಾಗುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ ತರಾತುರಿಯಲ್ಲಿ ಒಪ್ಪಿಕೊಂಡುಬಿಟ್ಟೆವು. ಅದನ್ನು ನಾವು ಈಗ ಒಪ್ಪಿಲ್ಲ ಎನ್ನತಕ್ಕಂಥಾದ್ದು ಅಲ್ಲ. ಆದರೆ, ಈಗ ನಮ್ಮ ಒಂದು ತಿಂಗಳ- ಎರಡು ತಿಂಗಳ ಅನುಭವದಲ್ಲಿ ನೋಡಿದಾಗ ಅದು ಇದ್ದರೇನೆ ಚೆನ್ನಾಗಿತ್ತು ಎಂದು ಕಾಣಿಸುತ್ತದೆ. ಕನಿಷ್ಟಪಕ್ಷ ಅಧಿಕಾರಿಗಳನ್ನು ಕರೆದು ಆ ಇಲಾಖೆಯಲ್ಲಿ ಏನು ನಡೆಯುತ್ತದೆ ಎಂದು ನಾಲ್ಕೈದು ಸದಸ್ಯರಿಗಾದರೂ ಗೊತ್ತಾಗುತ್ತಿತ್ತು. ಈಗ ಗಿಲಿಟಿನ್ ಆಧಾರದಿಂದ ಎಲ್ಲ ನಡೆಯುವುದರಿಂದ ಯಾವ ಇಲಾಖೆಯಲ್ಲಿ ಏನು ನಡೆಯುತ್ತಿದೆ ಎಂದು ಚರ್ಚೆ ಮಾಡುವುದಕ್ಕೆ ಅವಕಾಶ ಕಡಿಮೆ ಆಗಿದೆ. ಈಗ ಶೂನ್ಯವೇಳೆ ಇರುವುದರಿಂದ ತಮಗೂ ಕೂಡ ಕಂಟ್ರೋಲ್ ಮಾಡುವುದಕ್ಕೆ ಇಕ್ಕಟ್ಟಾಗಿದೆ. ನಾವು ಸಹ ಅನೇಕ ಸಾರಿ ತೊಂದರೆ ಕೊಡುತ್ತೇವೆ ಅಥವಾ ಇಲ್ಲಿ ನಡೆಯುವಂಥ ಚರ್ಚೆ ಕೂಡ ಇಲಾಖೆಗಳ ಮೇಲೆ ಬೆಳಕು ಚೆಲ್ಲುವಂಥ ರೀತಿಯಲ್ಲಿ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಈ ಸಬ್ಜೆಕ್ಟ್ ಕಮಿಟಿಗಳನ್ನು ರಿವ್ಯೂ ಮಾಡಬೇಕೆಂದು ನಾನು ತಮ್ಮನ್ನು ಮೊನ್ನೆ ದಿವಸವೇ ಕೇಳಿಕೊಂಡಿದ್ದೇನೆ. ಈ ತಿದ್ದುಪಡಿಯನ್ನು ಹೇಗೆ ತಂದಿರಿ, ಅದೇರೀತಿಯಾಗಿ ಅದನ್ನು ಕೂಡ ತಂದು ಇಂಟ್ರಡ್ಯೂಸ್ ಮಾಡಬೇಕು. ಬೇಕಾದರೆ ಈ ಕಮಿಟಿಗಳಲ್ಲಿ ಸದಸ್ಯರುಗಳ ಸಂಖ್ಯೆಯನ್ನು ಕಡಿಮೆ ಮಾಡಿ. ಇದರೊಳಗೆ 15-20 ಸದಸ್ಯರುಗಳು ಇರಬೇಕೆನ್ನುವುದನ್ನು ಕಡಿಮೆಮಾಡಿ ಬೇಕಾದರೆ ಅದನ್ನು 8-10 ಎಂದು ಮಾಡಿ. ಆಮೇಲೆ ತಿಂಗಳಿಗೆ ಎರಡೇ ಸಲ ಸಭೆ ಸೇರಬೇಕೆಂದು ಕಟ್ಟುನಿಟ್ಟು ಮಾಡಿ. ಅದಕ್ಕೆ ಎಲ್ಲಾ ಗೈಡ್‌ಲೈನ್ಸ್ ಹಾಕಿ ಅವರಿಗೆ ಕೊಟ್ಟರೆ ಬಹುಶಃ ಆ ಇಲಾಖೆಯಲ್ಲಿ ನಡೆಯುವಂಥಾದ್ದು ಕೆಲವು ಸದಸ್ಯರುಗಳಿಗಾದರೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಏಕೆಂದರೆ ಈಗ ಇಲ್ಲಿ ಸದನದಲ್ಲಿ ಅನೇಕ ಬೇಡಿಕೆಗಳ ಮೇಲೆ ನಮಗೆ ಬೆಳಕು ಚೆಲ್ಲುವುದಕ್ಕೆ ಆಗುವುದಿಲ್ಲ. ಈಗಾಗಲೇ ಎಲ್ಲ ವಿಷಯಗಳು ಗಿಲಿಟಿನ್ ಆಗಿ ಹೋಗುತ್ತಿವೆ. ನಾವು ನೋಡಿದ ಹಾಗೆ ಎರಡು-ಮೂರು ವಿಷಯಗಳನ್ನು ಬಿಟ್ಟರೆ ಬಾಕಿ ಯಾವುದೂ ಕೂಡ ವಿವರವಾಗಿ ಚರ್ಚೆ ಆಗುವುದಕ್ಕೆ ಅವಕಾಶ ಆಗಿಲ್ಲ. ಆದಕಾರಣ ತಾವು ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕು. ಇದರ ಬಗ್ಗೆ ದು ಅಮೆಂಡಮೆಂಟನ್ನು ತಂದು ಪುನಃ ಇದನ್ನು ರೆಸ್ಟೋರ್ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಒಳಗಡೆ ಕುಳಿತಿದ್ದಾಗಲೂ ನಾನು ತಮ್ಮ ಗಮನಕ್ಕೆ ತಂದಿದ್ದೇನೆ, ಸರ್ಕಾರದ ಗಮನಕ್ಕೆ ತಂದಿದ್ದೇನೆ. ಸಬ್ಜೆಕ್ಟ್ ಕಮಿಟಿಗಳು ಇದ್ದಾಗ ಅನೇಕ ವಿಚಾರಗಳನ್ನು ಚರ್ಚೆ

ಮಾಡಿಕೊಂಡು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಆಗುತ್ತಿತ್ತು. ಈಗ ಅಧಿವೇಶನ ನಡೆಯುವ ದಿವಸಗಳ ಸಂಖ್ಯೆ ಕಡಿಮೆ ಆಗಿದೆ. ಆದ್ದರಿಂದ, ಬೇರೆ ದಿವಸಗಳಲ್ಲಿ ಸಬ್ಜೆಕ್ಟ್ ಸಾಕಷ್ಟು ಇರುವುದರಿಂದ ನಾವು ಹೆಚ್ಚಿಗೆ ಸರ್ಕಾರದ ಗಮನಕ್ಕೆ ತರುವುದಕ್ಕೆ ಆಗುವುದಿಲ್ಲ. ದಯವಿಟ್ಟು ಸಬ್ಜೆಕ್ಟ್ ಕಮಿಟಿಗಳನ್ನು ಪುನಃ ಜಾರಿಗೆ ತರುವುದಕ್ಕೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಸಮಸ್ಯೆಯಾಗುತ್ತದೆ. ಇದನ್ನು ಸ್ವಲ್ಪ ಸೀರಿಯಸ್ ಆಗಿ ತೆಗೆದುಕೊಂಡು ಇದೇರೀತಿಯಾಗಿ ಒಂದು ಅಮೆಂಡ್‌ಮೆಂಟ್ ತಂದು ಮಾಡಿಬಿಡಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಈ ವಿಷಯ ಸಮಿತಿಗಳು ಇರಬೇಕು ಎನ್ನತಕ್ಕಂಥ ಪ್ರತಿಪಾದನೆಯನ್ನು ನಾನು ಮೊದಲಿನಿಂದಲೂ ಮಾಡುತ್ತಿದ್ದೇನೆ. ಪ್ರಾಮಾಣಿಕವಾಗಿ ತಮ್ಮ ಹತ್ತಿರ ಹೇಳುತ್ತಿದ್ದೇನೆ, ಅನೇಕ ಸಂದರ್ಭದಲ್ಲೂ ಹೇಳಿದ್ದೇನೆ. ವಿಷಯ ಸಮಿತಿಗಳು ನಿಜವಾಗಿಯೂ ಬಹಳ ಮಹತ್ವಪೂರ್ಣವಾದ ಸಮಿತಿಗಳು. ಅನೇಕ ವಿಚಾರದಲ್ಲಿ ಆ ಸಮಿತಿಗಳು ಬಹಳ ಉಪಯುಕ್ತವಾಗಿ ಕೆಲಸ ಮಾಡುತ್ತಿವೆ. ಕೆಲವು ನ್ಯೂನತೆಗಳು ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ. ಅದನ್ನು ಸರಿಪಡಿಸುವುದಕ್ಕೆ ತಮಗೆ ಸಂಪೂರ್ಣವಾದಂಥ ಅಧಿಕಾರ ಇದೆ. ಆದ್ದರಿಂದ, ವಿಷಯ ಸಮಿತಿಯಲ್ಲಿ ಚರ್ಚೆಯಾದರೆ ಇಲ್ಲಿ ಎಲ್ಲ ಇಲಾಖೆಗಳ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿ ಒಂದು ವರದಿ ರೂಪದಲ್ಲಿ ಇಲ್ಲಿ ಬರುತ್ತಿತ್ತು. ಈಗ ಏನಾಗಿದೆ ಎಂದರೆ ಪ್ರತಿ ಬೇಡಿಕೆ ಮೇಲೆ ಇಬ್ಬರು ಅಥವಾ ಮೂರು ಮಂದಿ ಮಾತನಾಡುತ್ತಾರೆ. ಅಲ್ಲಿಗೇ ಚರ್ಚೆ ಮುಗಿಯುತ್ತದೆ. ಆದ್ದರಿಂದ, ನಮಗೆ ಇರತಕ್ಕಂಥ ಅಧಿಕಾರವನ್ನು ಮೊಟಕು ಮಾಡತಕ್ಕಂಥ ಪರಿಸ್ಥಿತಿ ಬರಬಾರದು, ದಯಮಾಡಿ ನಾವು ತಮ್ಮಲ್ಲಿ ಕಳಕಳಿಯ ಮನವಿ ಮಾಡುತ್ತಿದ್ದೇನೆ. ಇಡೀ ರಾಜ್ಯ, ದೇಶ ಎಲ್ಲ ಸುತ್ತಿ ಅನೇಕರು ವಿಷಯ ಸಮಿತಿ ರಚನೆಗಾಗಿ ತ್ಯಾಗ ಮಾಡಿದ್ದಾರೆ, ಅದಕ್ಕಾಗಿ ಕೆಲಸ ಮಾಡಿದ್ದಾರೆ. ಮತ್ತೆ ನಾನು ಲೋಕಸಭೆಗೆ ಹೋದಾಗ ಹಿಂದಿನ ಲೋಕಸಭಾಧ್ಯಕ್ಷರು ವಿಷಯ ಸಮಿತಿ ಬಹಳ ಮಹತ್ವವಾದದ್ದು, ಇಂತಹ ಸಮಿತಿಗಳು ಇರಬೇಕು ಎನ್ನುವ ವಿಚಾರ ಹೇಳಿರುವುದರಿಂದ ನಾನು ತಮಗೆ ಹೇಳುತ್ತಿದ್ದೇನೆ. ವಿಷಯ ಸಮಿತಿಗಳ ಕೆಲಸದ ಬಗ್ಗೆ ಕೆಲವು ಅಧಿಕಾರಿಗಳಿಗೆ ಒಂದು ರೀತಿಯ ಮುಜುಗರ ಇದೆ. ಈ ಅಧಿಕಾರಿಗಳ ಪಿತೂರಿಯಿಂದಾಗಿ ವಿಷಯ ಸಮಿತಿಗಳನ್ನು ರದ್ದು ಮಾಡತಕ್ಕಂಥ ವ್ಯವಸ್ಥೆ ಆಗುತ್ತಿದೆ ಎಂದು ನಾನು ನನ್ನ ಮನಸ್ಸಿನಲ್ಲಿ ಅಂದುಕೊಂಡಿರುವುದು. ಆದ್ದರಿಂದ ದಯವಿಟ್ಟು ತಾವು ಮತ್ತೆ ವಿಷಯ ಸಮಿತಿಗಳನ್ನು ತರಬೇಕೆಂದು ಹೇಳಿ ತಮ್ಮಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಡಾ॥ ಎಂ. ಪಿ. ಕರ್ಕಿ : ಬಜೆಟ್ ಅಧಿವೇಶನದಲ್ಲಿ ಚರ್ಚೆ ಮಾಡಬೇಕಾದರೆ It is almost a one way affair. ಎಂದು ನಾವೇನೋ ಹೇಳುತ್ತಾ ಇರುತ್ತೇವೆ. ಅವರು ಬೇಕಾಗಿದ್ದುದಕ್ಕೆ ಉತ್ತರ ಕೊಡುತ್ತಾರೆ, ಬೇಡದಿದ್ದುದನ್ನು ಬಿಡುತ್ತಾರೆ. ಆದರೆ ವಿಷಯ ಸಮಿತಿಯಲ್ಲಿ ನಾವು ಕರೆಕ್ಟ್ ಆಗಿ ನೋಡುತ್ತೇವೆ, ಏತಕ್ಕೆ ಎಂದು ನೋಡುತ್ತೇವೆ. ಸರಿಯಾಗಿ ಖರ್ಚಾಗಿದೆಯೇ ಎಂದು ನೋಡುತ್ತೇವೆ. ಅಲ್ಲಿ ಒಂದು ಸಂವಾದ ಆಗುತ್ತದೆ, ಚರ್ಚೆಯಾಗುತ್ತದೆ. ಆದರೆ ಇವತ್ತು ತಾವು ಎಷ್ಟು ಅವಕಾಶ ಕೊಟ್ಟರೂ ಕೂಡ ಒಂದು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯಲ್ಲಿ ಅನುಕೂಲವಾಗತಕ್ಕಂಥ ಚರ್ಚೆಯಾಗುವುದಿಲ್ಲ. ಅದಕ್ಕಾಗಿ ವಿಷಯ ಸಮಿತಿ ಇರಬೇಕಾಗುತ್ತದೆ. ವಿಷಯ ಸಮಿತಿಯಲ್ಲಿ ಅನೇಕ

ವಿಷಯಗಳು ಗೊತ್ತಾಗುತ್ತವೆ. ಎಜುಕೇಶನ್ ಕಮಿಟಿಯಲ್ಲಿದ್ದಾಗ - I was educated to a great extent. ಮತ್ತೊಂದು ಏನೆಂದರೆ, ಯಾವುದಾದರೂ ಪಾಲಿಸಿ ಮ್ಯಾಟರ್ ಇದ್ದರೆ ಸರ್ಕಾರಕ್ಕೆ ತಿಳುವಳಿಕೆ ಕೊಡುವುದಕ್ಕೆ ನಮಗೆ ಅನುಕೂಲವಾಗುತ್ತದೆ. ಈ ರೀತಿಯಲ್ಲಿ ತಾವು ವಿಷಯ ಸಮಿತಿಗಳನ್ನು ತಿರುಗಿ ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಸಾರಾಸಗಟಾಗಿ ವಿಷಯ ಸಮಿತಿನೇ ಸರಿ ಎಂದು ಹೇಳಿಕೊಳ್ಳುವುದರಲ್ಲಿ ನನ್ನದು ಭಿನ್ನಾಭಿಪ್ರಾಯ ಇದೆ. ಏಕೆಂದರೆ ಬೇಡಿಕೆಗಳು ಸದನದಲ್ಲಿ ಚರ್ಚೆಯಾದರೆ ಈ ಸದನದ ಸದಸ್ಯರುಗಳಿಗೆ ಆ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಇರತಕ್ಕಂಥ ಅವಕಾಶ ಬೇರೆ ಸಂದರ್ಭದಲ್ಲಿ ಸಿಗಲಿಕ್ಕೆ ಸಾಧ್ಯವೇ ಇರುವುದಿಲ್ಲ. ನಮ್ಮ ನಮ್ಮ ಕ್ಷೇತ್ರದ ವಿಷಯ ಬಂತು, ಇಲಾಖೆಗೆ ಸಂಬಂಧಪಟ್ಟಂಥ ಲೋಪದೋಷಗಳೇ ಬಂತು, ಈ ಸದನದ ಪ್ರತಿಯೊಬ್ಬ ಸದಸ್ಯರೂ ಕೂಡ ಚರ್ಚೆಯಲ್ಲಿ ಪಾಲ್ಗೊಂಡು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಮುಕ್ತ ವಾತಾವರಣವನ್ನು ಕಲ್ಪಿಸಿಕೊಡತಕ್ಕಂಥ ಒಂದೇ ಒಂದು ಸಂದರ್ಭ ಇದು. ಆದ್ದರಿಂದ ಪ್ರತಿಯೊಬ್ಬ ಸದಸ್ಯ ಇಲ್ಲಿಗೆ ಚುನಾಯಿತನಾಗಿ ಬಂದಮೇಲೆ ಸರ್ಕಾರದ ಒಂದೇ ಇಲಾಖೆಯಲ್ಲ, ಪ್ರತಿಯೊಂದು ಇಲಾಖೆಯ ಕಾರ್ಯವಿಧಾನ ಅದರ ಕಾರ್ಯ ವ್ಯವಸ್ಥೆಯನ್ನು ತಿಳಿದುಕೊಳ್ಳುವುದಕ್ಕೆ ಮತ್ತು ತಿಳಿದುಕೊಂಡು ತನ್ನ ಅಭಿಪ್ರಾಯವನ್ನು ಕೊಡುವುದಕ್ಕೆ ಅದು ಒಂದು ಸುವರ್ಣಾವಕಾಶ. ಅದನ್ನು ನಾವು ಯಾರೂ ಕಳೆದುಕೊಳ್ಳುವುದಕ್ಕೆ ಸಿದ್ಧರಿಲ್ಲ. ಜೊತೆಗೆ ಏನಾಗಿದೆ ಎಂದರೆ, ಹಿಂದೆ ಬೇಡಿಕೆ ಮೇಲೆ ಚರ್ಚೆ ಮಾಡತಕ್ಕಂಥ ಕಾಲದಲ್ಲಿ 25 ದಿವಸಗಳ ಕಾಲ ಬೇಡಿಕೆಗಳ ಮೇಲೆ ನಾವು ಚರ್ಚೆ ಮಾಡುತ್ತಿದ್ದೆವು. ಇವತ್ತು ಬೇಡಿಕೆಯನ್ನು ಚರ್ಚೆಗೆ ಇಟ್ಟರೆ ಸಣ್ಣ ಬೇಡಿಕೆ ಇದ್ದರೆ ಅವತ್ತೇ ಉತ್ತರ ಕೊಡುತ್ತಿದ್ದರು, ಮತ್ತು ದೊಡ್ಡ ಬೇಡಿಕೆ ಇದ್ದರೆ ಎರಡು ದಿವಸ ಆಗುತ್ತಿತ್ತು. ಹೀಗೆ ಅದಕ್ಕೆ ಮಿತಿ ಇರುತ್ತಿತ್ತು. ಇವತ್ತು ಪ್ರತಿದಿವಸ ಬರೇ ಶೂನ್ಯವೇಳೆ ಅಥವಾ ನಿಯಮ 69ರ ಮೇಲೆ ಚರ್ಚೆ ಇದರಲ್ಲೇ ಕಳೆದರೆ ನಾವು ಬೇಡಿಕೆಗಳ ಮೇಲೆ ಏನು ಚರ್ಚೆ ಮಾಡುವುದಕ್ಕೆ ಆಗುತ್ತದೆ? ನೀವು ಅದನ್ನು ಮಾಡಿ, ನಾನು ಬೇಡವೆಂದು ಹೇಳುವುದಿಲ್ಲ. ನಮಗೆ ಬೇಡಿಕೆಗೆ ಇಟ್ಟಂಥ 22-23-24-25 ದಿವಸ ನಿಖರವಾಗಿ ಕೊಟ್ಟುಬಿಟ್ಟರೆ ಎಲ್ಲ ಚರ್ಚೆಯಾಗುತ್ತದೆ. ಆಗ ಎಲ್ಲರೂ ಚರ್ಚೆಯಲ್ಲಿ ಪಾಲ್ಗೊಳ್ಳುತ್ತೇವೆ. ಅಲ್ಲಿ ವಿಷಯ ಸಮಿತಿಗಳಲ್ಲಿ ಚರ್ಚೆಯಾಗುತ್ತದೆ; ಆದರೆ, ಏನು ಚರ್ಚೆಯಾಗುತ್ತದೆ ಎಂದು ಈ ಸದನದ ಸದಸ್ಯರುಗಳಿಗೆ ಹೇಗೆ ಗೊತ್ತಾಗುತ್ತದೆ? ಏನೂ ಗೊತ್ತಾಗುವುದಿಲ್ಲ. ಅಲ್ಲಿ ಎಷ್ಟು ಜನ ಸೇರುತ್ತಾರೆ, ಎಷ್ಟು ಜನ ಹೋಗುತ್ತಾರೆ, ಎಷ್ಟು ಜನರು ಚರ್ಚೆಯಲ್ಲಿ ಭಾಗವಹಿಸುತ್ತಾರೆ ಎಂದು ನಮಗೆ ಗೊತ್ತಿದೆ. ಆದ್ದರಿಂದ ಇವತ್ತು ಇಲ್ಲಿ ಕೊನೆಯಪಕ್ಷ ಅಷ್ಟೂ ಜನರಿಗೆ ಅಲ್ಲದಿದ್ದರೂ, ಎಲ್ಲ ಜನರಿಗೆ ಅವಕಾಶ ಸಿಗುತ್ತದೆ. ಪಬ್ಲಿಸಿಟಿ ಸಿಗುತ್ತದೆ, ಜನರಿಗೆ ಇದರ ಮೆಸೇಜ್ ಹೋಗುತ್ತದೆ. ಅವರಿಗೆ ಅರ್ಥಮಾಡಿಕೊಳ್ಳುವುದಕ್ಕೆ ಆಗುತ್ತದೆ. ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನಮಗೆ ಅವಕಾಶ ಆಗುತ್ತದೆ. ನೀವು ಹೇಳಿದ್ದು ಸರಿಯಿದ್ದರೆ ನಾವು ಒಪ್ಪಿಕೊಳ್ಳುತ್ತೇವೆ, ಇಲ್ಲವೆಂದರೆ ನನಗೆ ಉತ್ತರ ಹೇಳುವುದಕ್ಕೆ ಅವಕಾಶ ಸಿಗುತ್ತದೆ. ಬಹುಶಃ ಇವತ್ತು ಲೋಕಸಭೆಯಲ್ಲಿ ವಿಷಯ ಸಮಿತಿಗಳ ವ್ಯವಸ್ಥೆ ಇದೆ, ಅಲ್ಲಿ ಚರ್ಚೆ ಮಾಡುತ್ತಾರೆ ಎಂದರೆ ಅಲ್ಲಿ ನಡೆಯತಕ್ಕಂಥ ವ್ಯವಸ್ಥೆ ಬೇರೆ ಇದೆ. ನಮ್ಮ ರಾಜ್ಯದ ವಿಧಾನಸಭೆಯಲ್ಲಿ ಬೇಡಿಕೆಗಳು ಅತ್ಯಂತ ಪ್ರಮುಖವಾದಂಥ ಅಂಶ. ಆ

ಚರ್ಚೆ ಸಂದರ್ಭದಲ್ಲಿ ಈ ಸಭೆಯ ಪ್ರತಿಯೊಬ್ಬ ಸದಸ್ಯರೂ ಪಾಲ್ಗೊಳ್ಳಬೇಕು. ಪಾಲ್ಗೊಳ್ಳುವುದಕ್ಕೆ ಆಗದಿದ್ದರೆ ಬೇರೆಯವರು ಹೇಳಿದ್ದನ್ನು ಕೇಳಿಕೊಂಡು ಅವಕಾಶವನ್ನು ಕಲ್ಪಿಸಿಕೊಡಬಹುದು. ಆದರೆ, ನಮಗೆ ಇರತಕ್ಕಂಥ ಹಕ್ಕನ್ನು ಮೊಟಕು ಮಾಡುವುದರಲ್ಲಿ ನನ್ನ ಸಂಪೂರ್ಣವಾದಂಥ ವಿರೋಧ ಇದೆ. ಅಧ್ಯಕ್ಷರೇ, ದಯವಿಟ್ಟು ತಾವು ಏನಾದರೂ ಇದನ್ನು ಮತ್ತೆ ಪುನರ್ ಪರಿಶೀಲನೆ ಮಾಡುವುದಾದರೆ ಈ ಸಭೆಯಲ್ಲಿ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಅವರು ತಪ್ಪು ತಿಳಿದುಕೊಂಡಿದ್ದಾರೆ. ಎಲ್ಲಾ ಬೇಡಿಕೆಗಳು ಚರ್ಚೆ ಇಲ್ಲದೆ ಬರೀ ವಿಷಯ ಸಮಿತಿಯ ಮುಂದೆಯೇ ಆಗುತ್ತವೆ ಎಂಬ ಭಾವನೆಯಿಂದ ಮಾತನಾಡುತ್ತಿದ್ದಾರೆ. ನಮ್ಮ ಮುಂದೆ ಸುಮಾರು 40-50 ಬೇಡಿಕೆಗಳು ಇದ್ದರೆ, ಈ ಸಲ ಆಯ್ಕೆ ಮಾಡಿಕೊಂಡು 20 ಅಥವಾ 30 ಮುಂದಿನ ವರ್ಷ ಉಳಿದಂಥವು ಹೀಗೆ ಬೇರೆ ಬೇರೆ ರೀತಿಯಿಂದ ಈ ವರ್ಷ ಚರ್ಚೆ ಮಾಡಿದ್ದನ್ನು ಮುಂದಿನ ವರ್ಷ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಕೆಲವು ಸಲ ವಿಷಯ ಬದಲಾವಣೆ ಮಾಡಿಕೊಳ್ಳಬಹುದು. ಈ ಸಾರಿ ಇರಿಗೇಷನ್, ಹಣಕಾಸು ಇಲಾಖೆಗಳ ಬಗ್ಗೆ ಚರ್ಚೆ ಮಾಡುವುದು. ಮುಂದಿನ ಸಲ ಸಾರಿಗೆ ಮತ್ತು ಒಳಾಡಳಿತ ಇತ್ಯಾದಿ ಮಾಡಿಕೊಳ್ಳುವುದಕ್ಕೆ ಅವಕಾಶ ಇರುತ್ತವೆ. ನಾವು ಎಂದೂ ಕೂಡ60 ಚರ್ಚೆ ಮಾಡಿಲ್ಲ. ಈಗಲೂ ಮಾಡುವುದಕ್ಕಾಗುವುದಿಲ್ಲ ಮತ್ತು ಹಿಂದೆಯೂ ಕೂಡ ಮಾಡುವುದಕ್ಕಾಗಿಲ್ಲ. ಎಲ್ಲಾ ಗಿಲೋಟಿನ್ ಮೇಲೆ ಎಷ್ಟೋಸಾರಿ ಹೋಗಿವೆ. ಅದಕ್ಕಾಗಿ ಕೆಲವು ಸೆಲೆಕ್ಟೆಡ್ 7-8 ವಿಷಯಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಅದರಲ್ಲಿ ಭಾಗಿಯಾಗಬಹುದು. ಅದರಲ್ಲೂ ತಮ್ಮ ಅಭಿಪ್ರಾಯಗಳನ್ನು ಹೇಳಬಹುದು, ಕೇರಳದಲ್ಲಿ ಇದು ನಡೆದಿದೆ ಎಂಬುದು ತಮಗೂ ಗೊತ್ತಿದೆ.

ಅಧ್ಯಕ್ಷರು : ಯೋಚನೆ ಮಾಡೋಣ. ಇದಕ್ಕೆ ನಾನಾ ಮುಖಗಳು ಇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪಾರ್ಲಿಮೆಂಟಿನಲ್ಲೂ ಕೂಡ ನಡೆದಿದೆ. ನಾನು ಅದಕ್ಕೇ ಹೇಳಿದೆ. ಇದಕ್ಕೆ ಸೀಮಿತಗೊಳಿಸಿ, ಕೊನೇಪಕ್ಷ ಸದಸ್ಯರನ್ನು ಕಡಿಮೆ ಮಾಡಿ, ಮಾಡತಕ್ಕಂಥಾದ್ದು ಬೇಕಾದರೆ ಮಾಡಿ. ಪ್ರಯೋಜನವಾಗಲಿಲ್ಲವೆಂದರೆ, ಇದರಲ್ಲಿ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಏನು ಸಾಧ್ಯವಿದೆ ಅದನ್ನು ನೋಡಿ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಕೃಷಿ ಇಲಾಖೆ ಬಗ್ಗೆ ಕಳೆದ ಎರಡು ದಿವಸದಿಂದ ಈ ಸದನದಲ್ಲಿ ಚರ್ಚೆ ನಡೆದಿದೆ. ನಾನು ಮಂತ್ರಿಯಾಗಿ ಮೂರು, ಮೂರೂವರೆ ವರ್ಷಗಳಾಗಿವೆ. ಕೃಷಿ ಇಲಾಖೆ ಎಲ್ಲಕ್ಕಿಂತ ಬಹಳ ಪ್ರಮುಖವಾದ ಇಲಾಖೆ. ನಮ್ಮ ಸರ್ಕಾರ ಬಂದಮೇಲೆ, ಕೃಷಿ ನೀತಿಯನ್ನೂ ಸಹ ರೂಪಿಸಿದ್ದೇವೆ ಮತ್ತು ಜಾರಿಗೆ ತಂದಿದ್ದೇವೆ. ಆದರೆ, ಈ ಸದನದಲ್ಲಿ ಇಂತಹ ಮುಖ್ಯ ವಿಚಾರ ಕಳೆದ ಮೂರು ವರ್ಷಗಳಿಂದ ಪ್ರಸ್ತಾಪವಾಗುವುದಕ್ಕೆ ಅವಕಾಶವಾಗಲಿಲ್ಲ. ಕೃಷಿ ಇಲಾಖೆಯಂಥ ಪ್ರಮುಖವಾದ ವಿಚಾರದ ಬಗ್ಗೆ ಚರ್ಚೆ ಆಗಲಿಲ್ಲ. ಏಕೆಂದರೆ, ಈ ಬೇಡಿಕೆಗಳು ವಿಷಯ ಸಮಿತಿ ಮುಂದೆ ಹೋಗುತ್ತವೆ. ಅವರು ಒಂದು ವರದಿ ಕೊಡುತ್ತಾರೆ. ಆ ವರದಿಯನ್ನು ಎಷ್ಟು ಜನ ಸದಸ್ಯರು ಮತ್ತು ಎಷ್ಟು ಜನ ಮಂತ್ರಿಗಳು ತೆಗೆದು ಓದಿದ್ದಾರೆ ಎಂಬ ಅನುಮಾನ ಇದೆ. ಆ

ಕೆಲಸವನ್ನು ನಾನು ಕೂಡ ಮಾಡಿಲ್ಲ. ಈ ಸಂದರ್ಭದಲ್ಲಿ ನಾನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಈ ಬೇಡಿಕೆಗಳಿಗೆ ಇರತಕ್ಕ ಮಹತ್ವ. ವಿಷಯ ಸಮಿತಿಗಳು ಬಂದಮೇಲೆ ಹೋಗಿದೆ. ಇವತ್ತು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ರೀತಿಯಲ್ಲಿ ಮತ್ತು ನಿನ್ನೆ ನನಗೆ ಬಹಳ ಸಂತೋಷವಾಯಿತು. ನಿನ್ನೆ ಅನೇಕ ಮಾನ್ಯ ಸದಸ್ಯರು ಮಾತನಾಡಿದ್ದನ್ನು ಕೇಳಿದೆ. ಈ ಅವಕಾಶ ವಿಷಯ ಸಮಿತಿಗಳು ಬಂದಮೇಲೆ ಇರಲಿಲ್ಲ. ವಿಷಯ ಸಮಿತಿಗಳು ಬಂದಮೇಲೆ, ರಾಜ್ಯದ ಜನತೆಗೂ ಕೂಡ ಇಲ್ಲೇನು ನಡೆಯುತ್ತದೆ ಎಂಬುದನ್ನು ತಿಳಿದುಕೊಳ್ಳತಕ್ಕ ಅವಕಾಶವೂ ಇರಲಿಲ್ಲ. ಒಂದು ವರದಿ ಇರುತ್ತದೆ, ಆ ವರದಿ ಅಚ್ಚುಕಟ್ಟಾಗಿ ಅಚ್ಚಾಗಿರುತ್ತದೆ, ಆ ವರದಿ ಹಾಗೆಯೇ ಇರುತ್ತದೆ. ಇದನ್ನು ತಾವು ದಯವಿಟ್ಟು ಗಮನಿಸಬೇಕು. ನಾನು ಕಳೆದ 20-25 ವರ್ಷಗಳಿಂದ ಈ ಸದನದಲ್ಲಿದ್ದೇನೆ. ಹಿಂದೆ, ಸದನದಲ್ಲಿ ಬೇಡಿಕೆಗಳು ಬರುತ್ತದೆ ಎಂದರೆ, ಮಂತ್ರಿಗಳಾದವರು ಗಡಗಡ ನಡುಗುತ್ತಿದ್ದುದನ್ನು ಎದುರುಗಡೆ ಕುಳಿತಂಥ ಸಂದರ್ಭದಲ್ಲಿ ಮಾನ್ಯ ಮಾಟಾಳ್ ನಾಗರಾಜರು ಕೂಡ ಗಮನಿಸಿದ್ದಾರೆ. ಹಿಂದೆ ಒಂದುಸಾರಿ ಏನೋ ಒಂದು ಸಣ್ಣ ಗಲಾಟೆ ನಡೆಯಿತು. ಒಬ್ಬ ಮಂತ್ರಿಗಳು ಸದನದಲ್ಲಿ ಉತ್ತರ ಕೊಡುವ ಸಲುವಾಗಿ, ನಂದಿಬೆಟ್ಟದ ಮೇಲೆ ಹೋಗಿ ಮೂರು ದಿವಸ ತಯಾರಿ ನಡೆಸಿದ್ದರು. ಅವತ್ತು ಗಲಾಟೆಯಾಯಿತು. ಅಧ್ಯಕ್ಷರು ಸ್ವಲ್ಪ ಸಿಟ್ಟಾದರು. ಅವತ್ತು ಗಿಲೋಟಿನ್‌ಗೆ ಹಾಕಿಬಿಟ್ಟರು. ಮಂತ್ರಿಗಳು ಇಲ್ಲೇ, ಈ ಸ್ಥಾನದಲ್ಲಿ ಕುಳಿತಿದ್ದರು. ಅವರು ಕಲೆಕ್ಟ್ ಮಾಡಿರತಕ್ಕಂಥ ಕಡತಗಳನ್ನು ತೆಗೆದುಕೊಂಡು ಓಡುತ್ತಿದ್ದುದನ್ನು ನೋಡಿ ನನಗೆ, ಆಶ್ಚರ್ಯವಾಯಿತು. ಏಕೆಂದರೆ, ಏನೋ ಒಂದು ಸಾಧನೆ. ಆ ಬೇಡಿಕೆ ಚರ್ಚೆ ಇಲ್ಲದೆ ಪಾಸಾಯಿತು, ಒಂದು ದೊಡ್ಡ ಸಾಧನೆ ಮಾಡುತ್ತೇವೆ ಎಂದು ಆ ಮಂತ್ರಿಗಳಿಗೆ ಭಾವನೆ ಇತ್ತು. ಅಂದರೆ, ಅಷ್ಟು ಹೆದರಿಕೆ ಇತ್ತು. ಇವತ್ತಿನದಿವಸ ಏನು ನಡೆಯುತ್ತಾ ಇದೆ. ವಿಷಯ ಸಮಿತಿಯ ಮುಂದೆ ನಮ್ಮ ಅಧಿಕಾರಿಗಳು ಹೋಗುತ್ತಾರೆ. ಅಲ್ಲಿ ಯಾವ ಮಂತ್ರಿಗಳೂ ಹೋಗುವುದಕ್ಕೆ ಅವಕಾಶ ಇಲ್ಲ. ಮಂತ್ರಿಗಳಿಗೂ ಕೂಡ ಗೊತ್ತಾಗುವುದಿಲ್ಲ. ಮಂತ್ರಿಗಳಾಗಿರತಕ್ಕವರು ಏನಾದರೂ ಅವರ ಇಲಾಖೆ ಮೇಲೆ ಬಹಳಷ್ಟು ಶ್ರದ್ಧೆ ವಹಿಸಿ ಏನು ನಡೆಯುತ್ತಿದೆ, ಎಂಬುದನ್ನು ಗಮನಿಸಿದರೆ ಅರ್ಥಮಾಡಿಕೊಳ್ಳುವುದಕ್ಕಾಗುತ್ತದೆ. ಬೇರೆಯವರ ಅಭಿಪ್ರಾಯಗಳು ಏನಿದೆ ಎಂಬುದನ್ನು ತಿಳಿದುಕೊಳ್ಳತಕ್ಕ ಅವಕಾಶವೂ ಇಲ್ಲ. ಹೊರಗಡೆ ಹೋದಾಗ, ಸಾರ್ವಜನಿಕರು, ಸಾಮಾನ್ಯ ಜನ ಏನು ಹೇಳುತ್ತಾರೆ ಎಂಬುದನ್ನು ಜನತೆಯ ಮೂಲಕ ಮಂತ್ರಿಗಳಾದವರು ತಿಳಿದುಕೊಳ್ಳಬೇಕೇ ವಿನಹ ಚುನಾಯಿತ ಪ್ರತಿನಿಧಿಗಳ ಮೂಲಕ ತಿಳಿದುಕೊಳ್ಳತಕ್ಕ ಅವಕಾಶ ಇಲ್ಲ. ವಿಷಯ ಸಮಿತಿಯ ಮುಂದೆ ಚರ್ಚೆ ನಡೆಯುತ್ತದೆ. ಅನೇಕ ಸಭೆಗಳು ಕೂಡ ನಡೆಯುತ್ತವೆ ಅಲ್ಲಿ ಏನು ಚರ್ಚೆಯಾಗುತ್ತದೆ, ಯಾವರೀತಿ ಚರ್ಚೆಯಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳುವುದು, ತಿಳಿದುಕೊಳ್ಳುವುದು ಮುಖ್ಯವಾಗಿ ಆ ಇಲಾಖೆಯ ಜವಾಬ್ದಾರಿ ಹೊತ್ತಿರತಕ್ಕ ಮಂತ್ರಿಯ ಜವಾಬ್ದಾರಿ. ಆದರೆ, ಅದಕ್ಕೆ ಅವಕಾಶ ಇಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ, ಇಲ್ಲಿ ಮಾನ್ಯ ಸದಸ್ಯರುಗಳೂ ಕೂಡ ಯೋಚನೆ ಮಾಡಬೇಕಾಗುತ್ತದೆ. ಮತ್ತೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಕಂತಿನ ಮೇಲೆ ಕೆಲವು ಬೇಡಿಕೆಗಳನ್ನು ಈ ವರ್ಷ, ಇನ್ನು ಕೆಲವು ಬೇಡಿಕೆಗಳನ್ನು ಮುಂದಿನ ವರ್ಷ ತೆಗೆದುಕೊಳ್ಳಬಹುದು ಎಂದು. ಈ ರೀತಿ ಮಾಡಿದರೆ, ಎಷ್ಟರಮಟ್ಟಿಗೆ ಆ ಇಲಾಖೆಗಳಿಗೆ ನಾವು ನ್ಯಾಯವನ್ನು ದೊರಕಿಸಿಕೊಟ್ಟಹಾಗೆ

ಆಗುತ್ತದೆ. ಎಂಬುದು ನನಗಂತೂ ಕೂಡ ಅನುಮಾನವಾಗುತ್ತದೆ. ಇಲ್ಲಿ ಪ್ರತಿಯೊಂದು ವಿಷಯಗಳೂ ವಿವರವಾಗಿ ಚರ್ಚೆಯಾಗಬೇಕಾಗಿರುವುದು ಅವಶ್ಯಕತೆ ಇದೆ. ಮೊದಲು ಸರ್ಕಾರವೂ ಕೂಡ ತಿಳಿದುಕೊಳ್ಳಬೇಕು. ಏನಾಗುತ್ತಿದೆ, ಚುನಾಯಿತ ಪ್ರತಿನಿಧಿಗಳ ಅಭಿಪ್ರಾಯ ಏನಿದೆ, ಎಂಬುದನ್ನು ಸರ್ಕಾರ ಕೂಡ ತಿಳಿದುಕೊಳ್ಳಬೇಕಾಗಿರುವುದು ಅತಿ ಅವಶ್ಯಕ ಇದೆ. ಈ ದೃಷ್ಟಿಯಿಂದ ಇಲ್ಲಿ ಮುಕ್ತವಾದಂಥ ಚರ್ಚೆ ಆಗಬೇಕಾದ್ದು ಅತಿ ಅವಶ್ಯಕ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎ. ಮೊಹಿದ್ದೀನ್ : ಮಾನ್ಯ ಅಧ್ಯಕ್ಷರೇ, ಹಿಂದೆ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದಾಗ, ಆಡಳಿತಕ್ಕೆ ಚುರುಕು ಮುಟ್ಟಿಸಲಿಕ್ಕಾಗಿ ಮತ್ತೆ ಅನೇಕ ಸಂದರ್ಭಗಳಲ್ಲಿ ಮಂತ್ರಿಗಳಿಗೆ ಗೊತ್ತಿಲ್ಲದ ಕೆಲವು ಆಡಳಿತಾತ್ಮಕ ಲೋಪದೋಷಗಳು ಬಂದಾಗ ಅದನ್ನು ಮಂತ್ರಿಗಳ ಗಮನಕ್ಕೆ ತರತಕ್ಕಂಥ ಒಂದು ಸಮಿತಿಯನ್ನು ಆಗಿನ ಸರ್ಕಾರ ಮಾಡಿತ್ತು. ಅದೇ ಕನ್‌ಸಲ್ಟೆಟೀವ್ ಕಮಿಟಿ ಆಫ್ ದಿ ಪರ್ಟಿಕ್ಯುಲರ್ ಮಿನಿಸ್ಟ್ರಿ. ಇವತ್ತು ಲೋಕಸಭೆಯಲ್ಲಿ ಈ ಸಮಿತಿಯಿಂದ ಆಗಿಂದಾಗ ಸೇರುವುದರಿಂದ, ತಿಂಗಳಿಗೊಂಡು ಸಲ ಸೇರುವುದರಿಂದ ಸರ್ಕಾರದ ನೀತಿಯನ್ನು ಕೂಡ ನಾವು ಅಲ್ಲಿ ಪ್ರಕಟಣೆ ಮಾಡಲಿಕ್ಕೆ ಆಗುತ್ತದೆ. ಸರ್ಕಾರದ ಆಡಳಿತದಲ್ಲಿ ಮಾಡತಕ್ಕಂಥ ಬದಲಾವಣೆಗಳು ಮತ್ತು ಸರ್ಕಾರದ ನೀತಿಯನ್ನು ಕೂಡ ತಿಳಿಸುವುದಕ್ಕೆ ಸಾಧ್ಯವಾಗುತ್ತದೆ. ನನ್ನ ಸಲಹೆ ಏನೆಂದರೆ, ಆಡಳಿತದಲ್ಲಿ ಚುರುಕುಮುಟ್ಟಿಸುವುದಕ್ಕಾಗಿ, ಮತ್ತು ಆಡಳಿತದ ವಿಚಾರದಲ್ಲಿ ಶಾಸಕರು ಸೂಕ್ಷ್ಮವಾಗಿ ನೋಡತಕ್ಕಂಥ, ಈ ರೀತಿಯ ಕನ್‌ಸೆಲ್ಟೆಟೀವ್ ಕಮಿಟಿಗಳನ್ನು ಮಾಡುವುದು ಅವಶ್ಯಕ ಎಂದು ಭಾವಿಸಿದ್ದೇನೆ. ಇದರ ಬಗ್ಗೆ ಸದನ ಆಲೋಚನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, 1967ರಲ್ಲಿ ನಾವೆಲ್ಲಾ ಇದ್ದೆವು. ಮುಂದಿನ ಬೆಂಚಿನಲ್ಲಿ ಎಸ್. ಶಿವಪ್ಪನವರು, ಸಾಹುಕಾರ ಚನ್ನಯ್ಯನವರು, ಸಿದ್ದವೀರಪ್ಪನವರು, ಚನ್ನಬಸಪ್ಪನವರು, ಗೋಪಾಲಗೌಡರೂ ಇದ್ದರು, ಆಗ ವಿಧಾನ ಸಭೆ 90 ದಿನಗಳು ನಡೆದುದು ಉಂಟು. ಒಂದು ವರ್ಷ 95 ದಿನ ನಡೆಯಿತು. ಒಂದೊಂದು ಇಲಾಖೆ ಮೇಲೆ ಮೂರು ದಿನ ಚರ್ಚೆ ನಡೆದಿದೆ. ಆಗ ಶೂನ್ಯವೇಳೆ ಎಂಬುದು ಇರಲಿಲ್ಲ. ಈಗ ಏನಾಗಿದೆ ಎಂದರೆ, ನಾವು ತಯಾರಿ ನಡೆಸುವುದನ್ನೇ ಬಿಟ್ಟಿದ್ದೇವೆ ವಿರೋಧಪಕ್ಷದವರು ಪ್ರತಿ ಇಲಾಖೆಗೆ ಪೇಪರ್ ಕಟಿಂಗ್ಸನ್ನು ಹಿಡಿದುಕೊಂಡು ಇಲಾಖಾವಾರು ಒಂದೊಂದನ್ನು ಫೈಲ್ ಮಾಡಿ ಇಟ್ಟುಕೊಳ್ಳುತ್ತಿದ್ದರು. ಅವರು ಇಂಥಿಂಥವರು ಇಂಥಿಂಥ ಇಲಾಖೆ ಮೇಲೆ ಮಾತನಾಡಿ ಎಂದು ಜವಾಬ್ದಾರಿ ವಹಿಸುತ್ತಿದ್ದರು. ಈಗ ಡಿಮ್ಯಾಂಡ್ಸ್ ಚರ್ಚೆಗೆ ಬರುತ್ತದೆಯೋ ಇಲ್ಲವೋ ಎಂಬುದೇ ಗೊತ್ತಾಗುವುದಿಲ್ಲ. ಅದರಿಂದ, ಇದು ಅನಿಶ್ಚಿತ ಪರಿಸ್ಥಿತಿ. ಒಂದಲ್ಲ ಒಂದು ಕಾರಣದಿಂದ ಡಿಮ್ಯಾಂಡ್ಸ್ ಚರ್ಚೆಗೆ ಬರುವುದಿಲ್ಲ, ಸದಸ್ಯರು ಏನು ಮಾಡುತ್ತಾರೆ, ಈ ವಿಷಯ ಸಮಿತಿಯನ್ನಾದರೂ ಮಾಡಿ ಎಂದು ಹೇಳುತ್ತಾರೆ. ಈ ಪರಿಸ್ಥಿತಿ ಆ ಮಟ್ಟಕ್ಕೆ ಹೋಗಿದೆ. ನಾವು ಈ ವಿಷಯದಲ್ಲಿ ಅಸಹಾಯಕರಾಗಿದ್ದೇವೆ. ಇಲ್ಲಿ ಇನ್ನೊಂದೇನಾಗುತ್ತದೆಂದರೆ, ಹಿಂದೆ ನೀರಾವರಿ ವಿಚಾರ ಬಂತು ಎಂದರೆ, ನಿಲುವಳಿ ಸೂಚನೆ ಕಳುಹಿಸಿದರೆ ಆಗುತ್ತಿರಲಿಲ್ಲ. ಡಿಮ್ಯಾಂಡ್ಸ್ ಮೇಲೆ ಮಾತನಾಡಿ ಎಂದು ಹೇಳುತ್ತಿದ್ದರು. ಇನ್ನೊಂದು ಲಾ ಅಂಡ್ ಆರ್ಡರ್ ಸಿಚುಯೇಷನ್ ಬಂತು. ಡಿಮ್ಯಾಂಡ್

ಮೇಲೆ ಮಾತನಾಡಿ, ಇದಕ್ಕೆ ನಿಲುವಳಿ ಸೂಚನೆ ಬೇಡ ಎಂದು ಹೇಳುತ್ತಿದ್ದರು. ಡಿಮ್ಯಾಂಡ್ ಮೇಲೆ ಬರತಕ್ಕ ವಿಚಾರಗಳೆಲ್ಲಾ ಶೂನ್ಯವೇಳೆಯಲ್ಲಿ ಬರುತ್ತಿರುತ್ತವೆ. ನಿಲುವಳಿ ಸೂಚನೆ ಮುಖಾಂತರ ಬರುತ್ತಿರುತ್ತವೆ. ಸ್ಪೆಷಲ್ ನೋಟೀಸ್ ಮುಖಾಂತರ ಬರುತ್ತಿರುತ್ತವೆ. ಹೀಗಾಗಿ ಡಿಮ್ಯಾಂಡ್ಸ್ ಹಿಂದಕ್ಕೇ ಹೋಯಿತು. ಡಿಪಾರ್ಟ್‌ಮೆಂಟಿಗೆ ಚುರುಕು ಮುಟ್ಟಿಸುವುದಕ್ಕೇ ಆಗುವುದೇ ಇಲ್ಲ. ಈಗೇನು 16ನೇ ತಾರೀಖಿಗೆ ವಿಧಾನ ಸಭೆಯನ್ನು ಮುಗಿಸುತ್ತೀರಿ. ಒಂದಲ್ಲ ಒಂದು ಕಾರಣ, ಚರ್ಚೆಗೆ ಅವಕಾಶ ಇಲ್ಲ. ಯಾವ ಡಿಮ್ಯಾಂಡ್ಸ್ ಆಗುತ್ತವೆಯೋ, ಯಾವುದು ಹೋಗುತ್ತದೋ, ಯಾವುದು ಪ್ರಮುಖವಾದ ಇಲಾಖೆಗಳೋ ಒಂದೂ ಚರ್ಚೆಗೆ ಬರುವುದಿಲ್ಲ. ಇದಕ್ಕೆ ಏನಾದರೊಂದು ಮಾರ್ಗ ಕಂಡುಹಿಡಿಯಬೇಕು. ಸರ್ಕಾರಕ್ಕೆ ಏನಾಗಿದೆ ಎಂದರೆ, 16ನೇ ತಾರೀಖು ಕಳೆದರೆ ಸಾಕು, ಇನ್ನು 6 ತಿಂಗಳು ನೋಡಿ ಕೊಳ್ಳೋಣ ಎನ್ನುತ್ತಾರೆ. ಈ ಆಟಿಟ್ಯೂಡ್ ಬಂದರೆ ಭಾರಿ ಕಷ್ಟ.

ಅಧ್ಯಕ್ಷರು : ಸನ್ಮಾನ್ಯ ವಿರೋಧಪಕ್ಷದ ನಾಯಕರಾದಿಯಾಗಿ ಎಲ್ಲರೂ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ. ಈ ವಿಚಾರಕ್ಕೆ ವಿವಿಧ ಮುಖಗಳು ಇದ್ದಾವೆ. ಒಬ್ಬೊಬ್ಬರು ಒಂದೊಂದು ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಾವೂ ಕೂಡ ಕಳೆದ ಎರಡು ವರ್ಷಗಳಲ್ಲಿ ಏಕಾಏಕಿ ಇದನ್ನು ಕೈಬಿಡಬಾರದು ಎಂದು, ಕೆಲವು ಸುಧಾರಣೆಗಳನ್ನು ಮಾಡಿಕೊಂಡು, ಕೆಲವು ತಿದ್ದುಪಡಿಗಳನ್ನು ಮಾಡಿಕೊಂಡು, ನಮ್ಮೆಲ್ಲಾ ಪ್ರಯತ್ನಗಳನ್ನು ನಾವು ಮಾಡಿದೆವು. 1967 ಮತ್ತು 1972 ಎಲ್ಲಾ ಚೆನ್ನಾಗಿ ಇತ್ತು. ಆದರೆ 25 ವರ್ಷಗಳು ಆಗಿ ಹೋಯಿತು. ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಕಳೆದ 25 ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳು ಆಗಿವೆ. ವ್ಯಾಲ್ಯು ಅದು ತಮಗೆ ಗೊತ್ತಿದೆ. ವ್ಯಾಲ್ಯು ಸಿಸ್ಟಂ ಹೇಗೆ ಹೇಗೆ ಆಗಿದೆ ಎಂದು ತಮಗೂ ಗೊತ್ತಿದೆ. ರೂಲ್ಸ್ ಆಫ್ ಪ್ರೊಸೀಜರ್ ಅನ್ನು ಓದಿಕೊಂಡು ಬರತಕ್ಕಂಥವರು ಎಷ್ಟು ಜನರು ಇದ್ದರು, ಅಜೆಂಡಾ ನೋಡಿಕೊಂಡು ಬರತಕ್ಕಂಥವರು ಎಷ್ಟು ಜನರು ಇದ್ದರು. ಪಾಯಿಂಟ್ ಆಫ್ ಆರ್ಡರ್ ರೈಜ್ ಮಾಡತಕ್ಕಂಥವರು ಎಷ್ಟು ಜನರು ಇದ್ದರು? ಅವೆಲ್ಲವನ್ನು ನಾನು ಈಗ ಪ್ರಿಸೈಡಿಂಗ್ ಆಫೀಸರ್ ಆಗಿ ನೋಡುತ್ತಿದ್ದೇನೆ. ಮತ್ತೆ ಸಮಾಜ ಹೇಗೆ ಇರುತ್ತದೆಯೋ ಅದರ ರಿಫ್ಲೆಕ್ಷನ್ ಇಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲಿ ಇಲ್ಲದ್ದು ಇಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಇರುವುದನ್ನು ಇಲ್ಲಿ ತಪ್ಪಿಸಲೂ ಸಾಧ್ಯವಿಲ್ಲ. This is only a reflection on what the mainstream is ಹೊರಗೆ ನಡೆದಿರತಕ್ಕಂಥಾ ಅನೇಕ ವಿಚಾರಗಳಿಗೆ ನಾನು, ತಾವು ಯಾರೂ ಬಾಧ್ಯರಲ್ಲ. ಇದ್ದಿದ್ದರಲ್ಲಿ ಉತ್ತಮವಾಗಿ ಕೆಲಸ ಮಾಡಿಕೊಂಡು ಹೋಗತಕ್ಕಂಥ ಒಂದು ಹೊಣೆ ನಮ್ಮ ಮೇಲೆ ಬಿದ್ದಿದೆ. ಲೆಜಿಸ್‌ಲೇಚರ್ ರೆಸ್ಪಾನ್ಸಿಬಲ್ ಆಗಿ ಇರಬೇಕಾಗುತ್ತದೆ. ರೆಸ್‌ಪಾನ್ಸೀವ್ ಆಗಿ ಇರಬೇಕಾಗುತ್ತದೆ ಈ ಎರಡೂ ಪದಗಳಿಗೆ ಇರತಕ್ಕಂಥ ಸೂಕ್ಷ್ಮ ವ್ಯತ್ಯಾಸವನ್ನು ಗಮನಿಸುವುದಕ್ಕೆ ಅನೇಕ ಸಲ ನಾವು ತಯಾರಾಗಿರುವುದಿಲ್ಲ. ಮಾನ್ಯ ನಂಜೇಗೌಡರು ಹೇಳಿದ್ದುದು ಸರಿ. ಅದು ನನ್ನ ಮಿಸ್ಟೇಕ್ ಅಲ್ಲ. ತಾವು ನನ್ನ ಮೇಲೆ ಹೇಳಿದಿರಿ ಅಂತಲೂ ನಾನು ಭಾವಿಸುವುದಿಲ್ಲ. ಯಾವ ವಿಷಯವನ್ನು ಯಾವ ವ್ಯಾಪ್ತಿಯಲ್ಲಿ ತರಬೇಕು ಹೇಗೆ ಪ್ರಸ್ತಾಪ ಮಾಡಬೇಕು ಸಂಬಂಧ ಬಿಟ್ಟು ಒಂದು ವಿಷಯ ಪ್ರಸ್ತಾಪವಾದಾಗ ಅದನ್ನು ಹೇಗೆ ತಡೆಯಬೇಕು ಎನ್ನುವಂತಹ ಜವಾಬ್ದಾರಿಯನ್ನು ತಿಳಿದಂತಹವರು ಸದನದ ಎಲ್ಲಾ ಕಡೆಗೆ ಇದ್ದರು, ಅವರು ಬಹಳ ಎಚ್ಚರದಿಂದ ಇದ್ದರೆ ನನ್ನ ಕೆಲಸ ಬಹಳ ಸುಲಭವಾಗುತ್ತದೆ. ದಿವಂಗತ

ಪುಟ್ಟಸ್ವಾಮಿಯವರು ಈ ಸದನದಲ್ಲಿ ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಿ ಇದ್ದರು. ಆಗ ನಾನೇನು ಈ ಸದನದಲ್ಲಿ ಇರಲಿಲ್ಲ. ಬಹುಶಃ ಅಂತಹ ಒಬ್ಬ ಮೇಧಾವಿಯನ್ನು ನಾವು ನೋಡುವುದೇ ಕಷ್ಟ ಎಂದು ಕಾಣಿಸುತ್ತದೆ. ಅವರು ವಿರೋಧಪಕ್ಷದಲ್ಲಿ ಇರಲಿಲ್ಲ. ಸಂಸದೀಯ ವ್ಯವಹಾರಗಳ ಸಚಿವರಾಗಿದ್ದರು. ಅವರ ಸ್ಕಿಲ್ ಅನ್ನು ಹೊಸದಾಗಿ ನಾನು 1978ರಲ್ಲಿ ಬಂದಾಗ ಸ್ವಲ್ಪ ದಿವಸ ಅವರು ವಿರೋಧಪಕ್ಷದಲ್ಲಿದ್ದಾಗ ನೋಡಿ ಆಮೇಲೆ ಅವರ ಹಿಂದಿನ ಪ್ರೊಸಿಡೀಂಗ್ಸ್ ತೆಗೆದು ಓದಿದೆ ನಾನು. ಕೆ. ಪುಟ್ಟಸ್ವಾಮಿಯವರು ಸಂಸದೀಯ ವ್ಯವಹಾರಗಳ ಸಚಿವರಾಗಿ ಹೇಗೆ ಕೆಲಸ ಮಾಡುತ್ತಿದ್ದರು ಎಂದು. ನಾವು ಎಲ್ಲಿ ತರೋಣ. ಚನ್ನಬಸಪ್ಪನವರಂಥವರನ್ನು ಸಿದ್ದವೀರಪ್ಪನವರಂಥವರನ್ನು ಇಲ್ಲಿ ತರುವುದಕ್ಕೆ ಕಷ್ಟವಾಗುತ್ತದೆ. ಅದಕ್ಕೆ ನಾನು ಎಲ್ಲರನ್ನೂ ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲಾ ರಾಜಕೀಯ ಪಕ್ಷದವರೂ ಸಹ ಜವಾಬ್ದಾರಿಯನ್ನು ತೆಗೆದು ಕೊಳ್ಳಬೇಕಾಗುತ್ತದೆ. ಬೈರೇಗೌಡರು ಹೇಳಿದ್ದು ಸತ್ಯ: ಸಾಧನೆಗಳ ಬಗ್ಗೆ ಹೇಳುವುದಕ್ಕಾಗಲಿ ಅಥವಾ ತಪ್ಪುಗಳ ಬಗ್ಗೆ ಜನರಿಗೆ ಒಪ್ಪಿಸುವುದಕ್ಕೆ ಆಗಲಿ ಇದು ಸೂಕ್ತ ವೇದಿಕೆ. ಆ ಅವಕಾಶ ವಂಚನೆ ಆಗುತ್ತದೆ ಎನ್ನುವುದು ನಿಜ. ಆದರೆ ಸಬ್ಜೆಕ್ಟ್ ಕಮಿಟಿಯಿಂದ ಕ್ಲೋಜರ್ ಪ್ರಾಕ್ಸಿಮೆಟಿಯಿಂದ ಸ್ಕ್ರೂಟನಿ ಮಾಡುವುದಕ್ಕೆ ಏನು ಅವಕಾಶ ಇತ್ತು, ಅದು ತಪ್ಪಿ ಹೋಗಿದೆ ಎನ್ನತಕ್ಕಂಥಾದ್ದು ನಿಜ. ಯಾವಾಗಲೂ ತಪ್ಪು ಮಾಡಿದಂತಹವರು ವಿಚಾರಣೆಗೆ ಒಳಪಡುವುದಕ್ಕೆ ಇಷ್ಟಪಡುವುದಿಲ್ಲ. ಅವರು ರಾಜಕೀಯ ಧುರೀಣರಾಗಿರಬಹುದು, ಅಧಿಕಾರಿಗಳು ಆಗಿರಬಹುದು, ನಾವು ಎಲ್ಲೋ ಒಂದು ಕಡೆಗೆ ನಮ್ಮದೇ ಆದ ಕಾರಣಗಳಿಗೆ ತಪ್ಪಿತಸ್ಥರನ್ನು ಹಿಡಿದುಕೊಳ್ಳುವುದು ಅವರನ್ನು ವಿಚಾರಣೆಗೆ ಗುರಿಪಡಿಸುವಂತಹ ವಿಚಾರದಲ್ಲಿ ಅಲಕ್ಷ್ಯ ತೋರಿದಾಗ ಅದರ ಪರಿಣಾಮ ಎಲ್ಲೆಲ್ಲೋ ಹೋಗುತ್ತದೆ. ಗಿಲಿಟಿನ್‌ಗೆ ಹಾಕುವುದು ನನಗೇನೂ ಖುಷಿ ತರುವ ವಿಚಾರವಲ್ಲ. ನಾನು ನಿನ್ನೆಯೂ ಕೂಡ ತಮಾಷೆಗೆ ಅಂದ. ಸಾವಿರಾರು ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಕೊಟ್ಟು ಬಿಡುತ್ತೇವೆ ಈಗ ಎಂದು ಹೇಳಿ. ಅನೇಕ ಜನರಿಗೆ ಬೇಕಾದರೆ ನೀವು ಪರೀಕ್ಷೆ ಮಾಡಿ ನೋಡಿ. ಡಿಮ್ಯಾಂಡ್ಸ್ ಅಂದರೆ ಏನು? ಈ ಡಿಮ್ಯಾಂಡ್ಸನ್ನು ನಾವು ಅಪ್ರೂವ್ ಮಾಡಿ ಕೊಡುತ್ತಿರುವುದರಿಂದ ಏನಾಗುತ್ತಿದೆ? ಎಷ್ಟು ಹಣ ಕೊಡುತ್ತಿದ್ದೇವೆ. ನಾವು ಒಂದು ವೇಳೆ ಇದಕ್ಕೆ ಅಪ್ರೂವಲ್ ಕೊಡದೇ ಇದ್ದರೆ ಅದರ ಪರಿಣಾಮ ಏನಾಗುತ್ತದೆ ಎನ್ನುವ ತಿಳುವಳಿಕೆ ಬಹಳ ಜನರಿಗೆ ಇದ್ದಂತೆ ಇಲ್ಲ. ನಾನು ಇನ್ನೂ ಹೆಚ್ಚು ವಿಚಾರಗಳನ್ನು ಮಾತನಾಡುವುದಕ್ಕೆ ಹೋದರೆ ಅದು ನನ್ನ ಮೇಲೆ ತಮ್ಮ ಮೇಲೆ ಒಟ್ಟಾರೆ ಎಲ್ಲರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಯಾರೂ ಎಲ್ಲವನ್ನೂ ತಿಳಿದುಕೊಂಡು ಸರ್ವಜ್ಞರಾಗಿ ಇಲ್ಲಿಗೆ ಬರುವುದಿಲ್ಲ. ಇಲ್ಲಿಗೆ ಬಂದು ಕುಳಿತುಕೊಂಡು ಆಮೇಲೆ ತಿಳಿದುಕೊಳ್ಳುವಂಥಾದ್ದು ಪ್ರತಿ ಕ್ಷಣದಲ್ಲೂ ಸಾಕಷ್ಟು ವಿಚಾರಗಳು ಇರುತ್ತವೆ. ಮೊದಲು ಜವಾಬ್ದಾರಿ ಬರಬೇಕು. ತಿಳಿದುಕೊಳ್ಳುವುದಕ್ಕೆ ನಮ್ಮಲ್ಲಿ ಕಾತುರತೆ ಇರಬೇಕು. There is no end for learning. We learn several things by practice, by observation. ದಯಮಾಡಿ ನಾನು ಎಲ್ಲಾ ಸ್ನೇಹಿತರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಉಪ-ಮುಖ್ಯಮಂತ್ರಿಗಳೂ ಇದ್ದಾರೆ. ಸಭಾನಾಯಕರು ಇಲ್ಲ. ಸಂಸದೀಯ ವ್ಯವಹಾರಗಳ ಸಚಿವರು ನನ್ನ ಅನುಮತಿ ತೆಗೆದುಕೊಂಡು ಹೋಗಿದ್ದಾರೆ. ಒಂದು ದಿವಸ ನಾನು ಎಲ್ಲಾ ಫ್ಲೋರ್ ಲೀಡರ್ಸನ್ನು ಕರೆಯುತ್ತೇನೆ. ಸೀನಿಯರ್ ಆದ ಶಾಸಕರು ಯಾರು ಇದ್ದಾರೆ ಅವರನ್ನು ಸಹ ನಾನು ಕರೆಸುತ್ತೇನೆ. ಆಡಳಿತ ಪಕ್ಷದಿಂದ ಮುಖ್ಯಮಂತ್ರಿಗಳನ್ನು ಉಪ ಮುಖ್ಯಮಂತ್ರಿಗಳನ್ನು

ಮತ್ತು ಸಂಸದೀಯ ವ್ಯವಹಾರಗಳ ಸಚಿವರನ್ನು ಮತ್ತು ಇನ್ನೂ ಕೆಲವು ಸೀನಿಯರ್ ಮಂತ್ರಿಗಳನ್ನು ಸಹ ನಾನು ಕರೆಯಿಸುತ್ತೇನೆ. Let us all sit together ಕುಳಿತುಕೊಂಡು ಚರ್ಚೆ ಮಾಡೋಣ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೇ ಕೆಲವರು ಬೇಕು ಎಂದು ಹೇಳುವವರು ಇದ್ದಾರೆ. ಇನ್ನು ಕೆಲವರು ಬೇಡ ಎಂದು ಹೇಳುವವರು ಇದ್ದಾರೆ.

ಅಧ್ಯಕ್ಷರು : ವೈಯಾ ಮೀಡಿಯಾ ಮಾಡೋಣ.

SRI SIDDARAMAIAH : In the interest of the State, in the interest of the people ಸರ್ಕಾರದ ದೋಷಗಳನ್ನು ಯಾವುದರಿಂದ ಹೆಚ್ಚು ಪರಿಣಾಮಕಾರಿಯಾಗಿ ತಿದ್ದುವುದಕ್ಕೆ ಸಾಧ್ಯವಾಗುತ್ತದೆ, ಯಾವ ಪದ್ಧತಿ ಮಾಡಿದರೆ ಅನುಕೂಲವಾಗುತ್ತದೆ ಎನ್ನುವುದನ್ನು ನೋಡೋಣ.

ಅಧ್ಯಕ್ಷರು : ನಾನು ಒಂದೇ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ ನಂಜೇಗೌಡರು ಆಗಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಆಗಲಿ ವಾಟಾಳ್ ನಾಗರಾಜ್ ಅವರು ಆಗಲಿ ಈ ಕಡೆಯವರು ಯಾರಾದರೂ ಆಗಲಿ ನಮ್ಮ ಗ್ರಂಥಾಲಯಕ್ಕೆ ಹೋಗಿ ತಾವು ವಿಚಾರಿಸಿ ನಮ್ಮ ಗ್ರಂಥಾಲಯಕ್ಕೆ ಎಷ್ಟು ಜನ ಹೋಗಿದ್ದಾರೆ, ಎಷ್ಟು ಜನ ಎಷ್ಟೆಷ್ಟು ಪುಸ್ತಕಗಳನ್ನು ತೆಗೆದುಕೊಂಡು ಹೋಗಿದ್ದಾರೆ ಯಾವ ಯಾವ ಪುಸ್ತಕಗಳನ್ನು ತೆಗೆದುಕೊಂಡು ಹೋಗಿದ್ದಾರೆ ಎನ್ನುವುದನ್ನು ನೋಡಿ. In my own way I keep getting information. I am pained to say this. We have one of the best of libraries ಇಷ್ಟೆಲ್ಲಾ ಸೌಲಭ್ಯಗಳನ್ನು ನಮ್ಮ ಸದಸ್ಯರಿಗೆ ನಾವು ಮಾಡಿಕೊಟ್ಟು if they don't apply their mindನಾನು ಏನು ಮಾಡುವುದಕ್ಕೆ ಆಗುತ್ತದೆ ಹೇಳಿ. ತಮಗೆ ಗೊತ್ತಿದೆ. ಯಾರೂ ಎಂದೂ ಮಾಡದೇ ಇರತಕ್ಕಂಥ ಒಂದು ಹೊಸ ಪದ್ಧತಿಯನ್ನು ಮಾಡಿದ್ದೇವೆ. ಕೆಲವು ಸಲ ಸದಸ್ಯರು ಬಂದು ಸಹಿ ಹಾಕಿ ಹಾಗೆಯೇ ಹೊರಟು ಹೋಗಿರುತ್ತಾರೆ. ಇದು ಚೆನ್ನಾಗಿರುವುದಿಲ್ಲವಲ್ಲ ಎಂದು ಹೇಳಿ ಅವರು ಒಳಗಡೆ ಇರಬೇಕು ಎಂದು ಗುಟ್ಟಾಗಿ ಹೇಳಿ ಕೊಟ್ಟಿದ್ದೇನೆ. ಸ್ವಲ್ಪ ಅವರನ್ನು ಕರೆಸಿ ಬರುವಂತೆ ಮಾಡಿ ಎಂದು ಹೇಳುತ್ತೇನೆ. ಆಮೇಲೆ ಅವರ ಹೆಸರನ್ನು ಇಲ್ಲಿ ಓದಿ ಹೇಳಿದ್ದೇನೆ ಏನು ಅವರು ಎಲ್ಲಿಯೂ ಕಾಣುತ್ತಿಲ್ಲವಲ್ಲ. ಅವರು ರೂಮ್‌ನಲ್ಲಿ ಇಲ್ಲ ಊರಿನಲ್ಲಿ ಇಲ್ಲ, ಎಲ್ಲಿದ್ದಾರೆ ಎಂದು ಸ್ವಲ್ಪ ನೋಡಿ ಪತ್ತೆ ಮಾಡಿ ಎಂದು ಹೇಳುತ್ತಿದ್ದೆ. All these things. I have been trying only to improve the presence of the hon. members in the House. ಈ ಸದನಕ್ಕೆ ಒಂದು ಗೌರವ ಬರುವುದುಬೇಡವೇ. ಜನ ಪ್ರತಿನಿಧಿಗಳ ಸಭೆ ಎನ್ನುವುದಕ್ಕೆ ಒಂದು ಮಾನ್ಯತೆ ಸಿಗುವುದು ಬೇಡವೇ? ಇಲ್ಲಿಗೆ ಇದನ್ನು ಮುಕ್ತಾಯ ಮಾಡೋಣ ನಮ್ಮ ಬಿಜಿನೆಸ್ ಪ್ರಕಾರ ಹೋಗೋಣ. ಈಗ ಪ್ರಸ್ತಾವ ಅರ್ಧಕ್ಕೆ ನಿಂತು ಹೋಗಿದೆ. ಅದನ್ನು ಪೂರ್ಣಗೊಳಿಸೋಣ. ಪ್ರಸ್ತಾವ ಏನೆಂದರೆ ಕರ್ನಾಟಕ ವಿಧಾನ ಸಭೆಯು ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳಿಗೆ ತಿದ್ದುಪಡಿಯನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.

370(1) ಸದನದ ಸದಸ್ಯರ ಅನುಕೂಲ ಮತ್ತು ಸೌಕರ್ಯಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸಲು ಮತ್ತು ಆ ಬಗ್ಗೆ ಸಲಹೆ ನೀಡಲು ಒಂದು ಸದನದ ಸಮಿತಿಯನ್ನು ರಚಿಸತಕ್ಕದ್ದು.

2) ಸಮಿತಿಯು ವಿಧಾನಸಭಾ ಉಪಾಧ್ಯಕ್ಷರನ್ನು ಮತ್ತು ಏಕ ವರ್ಗಾವಣೆಯ ಮತದ ಮೂಲಕ ದಾಮಾಷಾ ಪ್ರಾತಿನಿಧ್ಯದ ತತ್ವಕ್ಕೆ ಅನುಸಾರವಾಗಿ ಚುನಾಯಿತರಾಗುವ ಎಂಟು ಮಂದಿ ಸದಸ್ಯರನ್ನು ಹೊಂದಿರತಕ್ಕದ್ದು.

3) ಸಮಿತಿಯು ಒಂದು ವರ್ಷವನ್ನು ಮೀರದ ಅವಧಿಯವರೆಗೆ ಅಧಿಕಾರದಲ್ಲಿರತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ನಾವು ಶಾಸನ ರಚನೆ ತೆಗೆದುಕೊಳ್ಳೋಣವೇ ಅಥವಾ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣವೇ ?

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೇ ಶೂನ್ಯ ವೇಳೆಯನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಅದಕ್ಕೆ ನಾನು ಹೇಳಿದ್ದು. I just tried to test, ನಿಮಗೆ legislative business is the prime duty of legilatureಎನ್ನುವುದು ಮರೆತು ಹೋಗುತ್ತೀರಿ ನೋಡಿ. ಶೂನ್ಯ ವೇಳೆಯಲ್ಲಿ ಯಾವುದಾದರೂ ಒಂದು ವಿಷಯವನ್ನು ತೆಗೆದುಕೊಂಡು ಮಾತನಾಡುವುದೇ ನಿಮಗೆ ಮುಖ್ಯವಾಗುತ್ತದೆಯೇ ಹೊರತು, ನಾವು ರಜಾ ದಿನ ಕುಳಿತುಕೊಂಡಿದ್ದೇವೆ. ನಮಗೆ ಸಮಯ ಕಡಿಮೆ ಆಗುತ್ತಿದೆ. ರಜೆಗಳು ಬಂದಿದೆ ಎಂದು ಹೇಳಿ ನಾವು ಶಾಸನ ರಚನಾ ಕೆಲಸಕಾರ್ಯಗಳನ್ನು ಮಾಡಬೇಕೆಂದು ಕುಳಿತುಕೊಂಡ ದಿವಸ ಕೂಡ ಶೂನ್ಯವೇಳೆ ಬೇಕು ಎಂದು ಹೇಳುತ್ತೀರಿ. ಶೂನ್ಯವೇಳೆ ಆಮೇಲೆ ಚರ್ಚೆಗೆ ತೆಗೆದುಕೊಳ್ಳಬಹುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಶಾಸನ ರಚನಾ ಕಾರ್ಯಕ್ರಮವನ್ನು ನಾವು ಮುಂದಕ್ಕೆ ಹಾಕಬೇಕು ಎನ್ನುವ ಉದ್ದೇಶ ಏನೂ ನಮಗೆ ಇಲ್ಲ. ಶೂನ್ಯ ವೇಳೆಯಲ್ಲಿ ತೆಗೆದುಕೊಳ್ಳತಕ್ಕಂಥಾದ್ದು ಯಾವುದು ಪ್ರಾಮುಖ್ಯವಾಗಿರತ್ತದೆಯೋ ಅದನ್ನು ಕೇಳುತ್ತೇವೆ.

ಅಧ್ಯಕ್ಷರು : ಆಮೇಲೆ ತೆಗೆದುಕೊಳ್ಳೋಣವೇ.

ಶ್ರೀ ವಾಟಾಳ್ ನಾಗರಾಜ್ : ಅನೇಕ ಸಾರಿ ನಾವು ತಮ್ಮಲ್ಲಿ ಏನು ಒತ್ತಾಯ ಮಾಡುತ್ತಿದ್ದೇವೆ ಅಂದರೆ ಈ ಶಾಸನ ಸಭೆ ನೂರು ದಿನ ನಡೆಯಬೇಕು ಎಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಇವರು ಪ್ರತಿ ಸಾರಿ 12 ದಿನ 20 ದಿನ 30 ದಿನ ನಡೆಸಿ ತಕ್ಷಣ ಹೊರಟು ಹೋಗುತ್ತಾರಲ್ಲ ನಾವು ಎಲ್ಲಿಗೆ ಹೋಗಬೇಕು ಹೇಳಿ. ನೂರು ದಿನ ಶಾಸನ ಸಭೆ ನಡೆಸಲು ಸರ್ಕಾರ ತೀರ್ಮಾನ ಮಾಡಿಕೊಳ್ಳಬೇಡವೇನು ? ಅದು ಮಾಡುವಂತೆ ಇಲ್ಲ. ಅವರು 12ನೇ ತಾರೀಖಿಗೆ ಹೊರಟು ಹೋಗಬೇಕು 16ನೇ ತಾರೀಖಿಗೆ ಹೊರಟು ಹೋಗಬೇಕು ಅದಕ್ಕೆ ನಮಗೆ ಬೇಗ ಬೇಡಿಕೆಗಳಿಗೆ ಒಪ್ಪಿಗೆ ಕೊಟ್ಟುಬಿಡಿ ಎಂದು ಅವರು ಹೇಳಿದ್ದಕ್ಕೆಲ್ಲಾ ನಾವು ಕುಣಿಯುತ್ತಿದ್ದರೆ ಈ ಸದನದಲ್ಲಿ ನಾವ್ಯಾಕೆ ಇರಬೇಕು ಇಲ್ಲಿ. ಹಿಂದೆ ತಮಗೆ ಗೊತ್ತಿದ್ದ ಹಾಗೆ ನಾನು 1967 ಮತ್ತು 72ರಲ್ಲಿ ಸದನದಲ್ಲಿ ಇದ್ದಾಗ 94 ದಿವಸ ಈ ಸದನ ನಡೆದಿರತಕ್ಕಂಥಾದ್ದು ಉಂಟು. ಒಂದೊಂದು ಬೇಡಿಕೆ ಮೇಲೆ ಕನಿಷ್ಟ 4 ದಿವಸ ಚರ್ಚೆ ಆಗಿರತಕ್ಕಂಥಾದ್ದು